ನಾವು ಪಡೆದುಕೊಳ್ಳುತ್ತೇವೆ. ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸಿಂಧ್ಯಾರವರು ಒತ್ತಾಯಿಸಿದ ಹಾಗೆ, ತಾವು ನಮ್ಮನ್ನು ಈ ಬಗ್ಗೆ ಸಭೆಯೊಂದಕ್ಕೆ ಕರೆದಿದ್ದೇ ಆದಲ್ಲಿ, ಅವರನ್ನೂ ಕರೆಯಿರಿ. ಏನು ವಿವರ ಇದೆ ಅದನ್ನು ಹಂಚಿಕೆ ಮಾಡಿಕೊಳ್ಳುತ್ತೇನೆ. ನಾನು ಬೇಕಾದರೆ ಖಾಸಗಿಯಾಗಿ ಕೆಲವು ಕಾಗದಗಳನ್ನು ಕಳುಹಿಸಿಕೊಡುತ್ತೇನೆ.

ಇ) **ತೀರ್ಥಹಳ್ಳಿ ತಾಲ್ಲೂಕಿನ ಮೂವಳ್ಳಿಯ ನಾರಾಯಣ ಎಂಬುವವರು ಪಾಕೀಸ್ತಾನದಲ್ಲಿ ಸೆರೆಮನೆ ವಾಸ ಅನುಭವಿಸಿದ್ದು ಪುನರ್ವಸತಿಗೆ ಸರ್ಕಾರದಿಂದ ಸಹಾಯ ನೀಡುವ ಬಗ್ಗೆ.**

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೇ, ನನ್ನ ಕ್ಷೇತ್ರದ ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ ಹತ್ತಿರದ ಮಾವಳ್ಳಿಯ ನಾರಾಯಣ ಎನ್ನುವಂತಹ ಒಬ್ಬ ವ್ಯಕ್ತಿ 21 ವರ್ಷಗಳ ಕಾಲ ಪಾಕಿಸ್ತಾನದ ಜೈಲಿನಲ್ಲಿ ಬಂದಿಯಾಗಿದ್ದು ಮೊನ್ನೆ ಜುಲೈ 7ನೇ ತಾರೀಖು ಬಿಡುಗಡೆಯಾಗಿ ಊರಿಗೆ ಬಂದಿರತಕ್ಕಂಥ ವಿಚಾರವನ್ನು ಈ ಸದನದ ಮೂಲಕ ಸರ್ಕಾರದ ಗಮನಕ್ಕೆ ತರಬೇಕೆಂದು ನಾನು ಬಯಸುತ್ತೇನೆ. ನಾರಾಯಣ ಎನ್ನುವಂತಹ ವ್ಯಕ್ತಿ ಮಂಡಗದ್ದೆ ಹತ್ತಿರದ ಮೂವಳ್ಳಿ ಅನ್ನುವಂತಹ ಒಂದು ಗ್ರಾಮದ ಒಬ್ಬ ಕೃಷಿ ಕಾರ್ಮಿಕ ಕುಟುಂಬದವನು. 1978ರಲ್ಲಿ ಬೆಂಗಳೂರಿನಲ್ಲಿ ಬಂದು ಸತ್ಕಾರ್ ಹೋಟೆಲ್‌ನಲ್ಲಿ ಕೆಲಸ ಮಾಡಿದಂತಹ ವ್ಯಕ್ತಿ ಡ್ರೈವಿಂಗ್ ಕಲಿತು ಬಾಂಬೆಯಲ್ಲಿ ಒಂದು ಕಾರ್ ಡ್ರೈವಿಂಗ್ ಗೆಂದು ಹೋದಂತಹ ಮನುಷ್ಯ ಇನ್ನೊಂದಷ್ಟು ಹೆಚ್ಚು ಸಂಬಳ ಬರುತ್ತದೆಂಬ ಉದ್ದೇಶದಿಂದ ಮೀನುಗಾರಿಕೆಯ ಯಾಂತ್ರೀಕೃತ ಬೋಟ್‌ನ ಒಬ್ಬ ಮೆಕ್ಯಾನಿಕ್ಕಾಗಿ ಸೇರಿಕೊಳ್ಳುತ್ತಾನೆ. 1982ನೇ ಇಸವಿಯ ಒಂದು ಮಳೆಗಾಲದ ರಾತ್ರಿ ಇವನು ಯಾಂತ್ರೀಕೃತವಾದಂತಹ ಬೋಟ್‌ನಲ್ಲಿ ಮೆಕ್ಯಾನಿಕ್ಕಾಗಿ ಕೆಲಸಕ್ಕೆ ಹೋದಂತಹ ಸಂದರ್ಭದಲ್ಲಿ ಆತ ಕೆಲಸ ಮಾಡುತ್ತಿರತಕ್ಕಂಥ ಬೋಟ್ ಬಿರುಗಾಳಿಗೆ ಸಿಕ್ಕಿದ್ದರಿಂದಾಗಿ ಅದು ಎಲ್ಲಿಗೆ ಹೋಗುತ್ತಿದೆ ಎನ್ನುವುದರ ಅಂದಾಜು ಆಗಲಿಲ್ಲ. ಬೆಳಗಾಗಿ ನೋಡುವಷ್ಟರಲ್ಲಿ ಅವರು ಪಾಕಿಸ್ತಾನದ ಬಾರ್ಡರ್ ಒಳಗಡೆ ಹೋಗಿದ್ದರು. ಪಾಕಿಸ್ತಾನದ ಮಿಲಿಟರಿಯವರು ಇವರನ್ನು ಸುತ್ತುಗಟ್ಟಿ ನಾರಾಯಣ ಮತ್ತು ಸುಮಾರು 13–14 ಜನರು ಇದ್ದಂತಹ ಬೋಟ್ ಅನ್ನು ಪಾಕಿಸ್ತಾನಕ್ಕೆ ತೆಗೆದುಕೊಂಡು ಹೋಗಿ, ಇವರನ್ನು ಸಿಕ್ಕಾಪಟ್ಟೆ ಚಚ್ಚುತ್ತಾರೆ. ಸುಮಾರು ಎರಡು ತಿಂಗಳುಗಳ ಕಾಲ, ಬಹುಶಃ ಬದುಕಿದ್ದೇ ದೊಡ್ಡ ಮಾತು, ಆತನ ಮಾತಿನಲ್ಲಿ, ಆತನನ್ನು ಸಿಕ್ಕಾಪಟ್ಟೆ ಥಳಿಸಿ, ಇವರು ಭಾರತದ ಏಜೆಂಟರು, ಅವರು ಗೂಢಾಚಾರ ಮಾಡಲಿಕ್ಕಾಗಿ ಬಂದಿದ್ದಾರೆ ಎಂದು ಶಂಕಿಸಿ ಅದರ ಬಗ್ಗೆ ಅವರ ಬಾಯನ್ನು ಬಿಡಿಸಲಿಕ್ಕೆ ಎರಡು ತಿಂಗಳಿನಿಂದ ಪ್ರಯತ್ನಪಟ್ಟರೂ ಕೂಡ ಅವರಿಂದ ಅದು ಆಗಲಿಲ್ಲ.

21 ವರ್ಷಗಳ ಕಾಲ ಸೆರೆಮನೆಯಲ್ಲಿ ಕೂಡಿ ಹಾಕಿ, ಕೇವಲ ಎರಡು ರೊಟ್ಟಿಗಳನ್ನು ಮೂರು ಹೊತ್ತಿನಲ್ಲಿ ಕೊಟ್ಟು, ಬೆಳಗಾಗುವುದು ಸಂಜೆಯಾಗುವುದು ಗೊತ್ತಾಗದ ರೀತಿಯಲ್ಲಿ ಕತ್ತಲಿನ ಶೆಲ್ ನಲ್ಲಿ ಕೊಳೆಯುತ್ತಿದ್ದೆ ಎನ್ನುವುದನ್ನು ಆತ ಹೇಳುತ್ತಿದ್ದಾನೆ. 21 ವರ್ಷಗಳ ನಂತರ ಜುಲೈ 2ನೇ ತಾರೀಖು ಆತನನ್ನು ಬಿಡುಗಡೆ ಮಾಡಿದ್ದಾರೆ. ಜಮ್ಮುವಿನ ಬಾರ್ಡರ್‌ನಲ್ಲಿ ನಮ್ಮ ಮಿಲಿಟರಿಯವರ ಕೈಗೆ ಕೊಟ್ಟಿದ್ದಾರೆ. ಆ ಮಿಲಿಟರಿಯವರು ಅವರನ್ನು ತಪಾಸಣೆ ಮಾಡಿ ಭಾರತದ ನಕಾಶೆಯನ್ನು ತೋರಿಸಿ ನಿನ್ನ ಊರು ಯಾವುದು, ಯಾವ ಭಾಗದಲ್ಲಿ ಬರುತ್ತದೆ ಎಂದು ಕೇಳಿದಾಗ ಕರ್ನಾಟಕದ ಭಾಗದಲ್ಲಿ ಬೆರಳಿಟ್ಟು, ನಾಸಿಕ್ ಕಡೆ ತೋರಿಸಿದ್ದರಿಂದ ನಮ್ಮ ಮಿಲಿಟರಿಯವರು

ಮಿಲಿಟರಿ ಟ್ರಕ್ ಹತ್ತಿಸಿ ಕಳುಹಿಸಿದ್ದಾರೆ. ನಾಸಿಕ್‌ನಲ್ಲಿ ಇಳಿದುಕೊಂಡ ಸಂದರ್ಭದಲ್ಲಿ ಒಬ್ಬ ಮಿಲಿಟರಿ ಅಧಿಕಾರಿ ನಾರಾಯಣನ ಕೈಯಲ್ಲಿ 500 ರೂಪಾಯಿಗಳನ್ನು ಇಟ್ಟು ದಯವಿಟ್ಟು ನಿನ್ನ ಊರಿಗೆ ಹೋಗು ಎಂದು ಹೇಳಿದ್ದಾರೆ. ಜುಲೈ ಏಳನೇ ತಾರೀಖು ಶಿವಮೊಗ್ಗಕ್ಕೆ ಬಂದು ಶೀವಮೊಗ್ಗದಿಂದ ಬೆಳಗಿನಜಾವ ಮಂಡಗದ್ದೆಯಲ್ಲಿರತಕ್ಕಂತಹ ತನ್ನ ಮನೆಗೆ ಬರುತ್ತಾನೆ. ಮನೆಯನ್ನು ಅಂದಾಜಿನಲ್ಲಿ ಆತ ಹುಡುಕಿಕೊಂಡು ಬರುತ್ತಾನೆ. ಬೆಳಗಿನ ಜಾವ ಸುಮಾರು ಆರೂವರೆಗೆ ಬಂದಿರತಕ್ಕಂತಹ ನಾರಾಯಣನನ್ನು ಆತನ ಹೆತ್ತಂತಹ ತಾಯಿ ನರಸಕ್ಕ, ಆಕೆ ಕೂಡ ಗುರುತು ಹಿಡಿಯದೆ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸುಮಾರು ಎರಡು-ಮೂರು ಗಂಟೆಗಳ ಕಾಲ ಊರಿನವರೆಲ್ಲಾ ಸೇರುತ್ತಾರೆ, ಆದರೂ ಕೂಡ ಯಾರೂ ಗುರುತು ಹಿಡಿಯುವುದಿಲ್ಲ. ನಾನು ನಿಮ್ಮ ಮನೆಯವನು ನಿಮ್ಮ ಮಗ ಎಂದು ಹೇಳಿದಾಗ ಕೂಡ ಅನುಮಾನಕ್ಕೊಳಗಾಗುತ್ತಾರೆ. ಆತನ ತಂಗಿ ಒಬ್ಬಳು ಮನೆಯಿಂದ ಹೊರಗೆ ಬರುತ್ತಾಳೆ. ಆಕೆಯ ಹೆಸರು ಪಾರ್ವತಿ ಎಂದು. ಆದರೆ ನಾರಾಯಣ ಆಕೆಗೆ ಪ್ರಮೀಳಾ ಎಂದು ಕೂಗುತ್ತಾನೆ. ಅಂದರೆ ಚಿಕ್ಕ ವಯಸ್ಸಿನಲ್ಲಿ ಆಕೆಯನ್ನು ಪ್ರಮೀಳಾ ಎಂದು ಕೂಗುತ್ತಿದ್ದರು ಎಂದು ಗೊತ್ತಾಗಿ ತಾಯಿ ಹೋಗಿ ನನ್ನ ಮಗ ಹೌದು ಎಂದು ಅಪ್ಪಿಕೊಂಡು ಅಳುತ್ತಾಳೆ. ಈ ರೀತಿಯಲ್ಲಿ ಗುರುತು ಹಿಡಿಯುವ ಪರಿಸ್ಥಿತಿ ಆಗುತ್ತದೆ. ಅಧ್ಯಕ್ಷರೆ, ನಾನು ಹೇಳುವುದು ಇಷ್ಟೆ, ಸುಮಾರು 21 ವರ್ಷಗಳ ಕಾಲ ಆತ ಹೊಡೆತ ಬಡೆತ ತಿಂದು ಅರೆ ಜೀವವಾಗಿ ಆ ಒಂದು ಬೆಂಕಿಯಿಂದ ಹೊರಗೆ ಬಂದಿದ್ದೇ ದೊಡ್ಡ ಮಾತು. ಇಂಥದ್ದರಲ್ಲಿ ನಾರಾಯಣ ಇವತ್ತು ದುಡಿದುಕೊಂಡು ತಿನ್ನಲಾರದಂಥ ಪರಿಸ್ಥಿತಿಗೆ ಬಂದಿದ್ದಾನೆ. ಮೊನ್ನೆ ನಡೆದಂತಹ ಘಟನೆ ನಮಗೆ ಗೊತ್ತಿದೆ, ಫಾತಿಮಾ ಎನ್ನುವ ಚಿಕ್ಕ ಬಾಲಕಿ ತನ್ನ ಹೃದಯದ ಚಿಕಿತ್ಸೆಗೋಸ್ಕರ ಬೆಂಗಳೂರಿಗೆ ಬಂದಾಗ ಮಾಧ್ಯಮಗಳು, ನಮ್ಮ ಸರ್ಕಾರ, ಸ್ವತಃ ನಮ್ಮ ಕ್ಯಾಬಿನೆಟ್ ಸಚಿವರು ನಾರಾಯಣ ಹೃದಯಾಲಯಕ್ಕೆ ಹೋಗಿ ಆ ಮಗುವಿಗೆ ಶುಭಾಶಯಗಳನ್ನು ಹೇಳಿ, ಮುಖ್ಯ ಮಂತ್ರಿಗಳ ಪರಿಹಾರನಿಧಿಯಿಂದ ಹಣವನ್ನೂ ಕೂಡ ಕೊಟ್ಟು ಬಂದಿದ್ದಾರೆ. ತುಂಬಾ ಒಳ್ಳೆಯದು. ಹೀಗೆ ಬೇರೆ ಒಂದು XXX ರಾಷ್ಟ್ರದಿಂದ ಬಂದಾಗ ಈ ರೀತಿ ನಾವು ಎಷ್ಟು ಹೃದಯವಂತರು ಎಂದು ಹೇಳುವಂಥದ್ದನ್ನು ನಮ್ಮ ಸರ್ಕಾರ ಏನು ತೋರಿಸಿದೆ, ಇದನ್ನು ನಾವು ಅಭಿನಂದಿಸಬೇಕಾಗುತ್ತದೆ. ನಮ್ಮ ಸಂಬಂಧಗಳು ಉತ್ತಮವಾಗಬೇಕಾದರೆ ಈ ರೀತಿಯ ಕೆಲಸಗಳನ್ನು ನಾವು ಮಾಡಬೇಕಾಗುತ್ತದೆ. ಪಾಕಿಸ್ತಾನದವರು XXX ಅಲ್ಲವೆಂದರೆ, ನೀವು ಇನ್ಯಾವುದು ರಾಷ್ಟ್ರ ಎಂದು ಹೇಳಿ ಗೊತ್ತಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಹಾಗಾದರೆ ಬಸ್ಸುಗಳನ್ನು ಏಕೆ ಬಿಡುತ್ತಿದ್ದೀರಿ? ಅಲ್ಲಿಗೆ ಹೋಗುವವರನ್ನೆಲ್ಲಾ ಬ್ಯಾನ್ ಮಾಡಿ ಬಿಡಿ. ಪಾಸ್‌ಪೋರ್ಟ್ ವೀಸಾ ಮತ್ತೊಂದು ಎಲ್ಲವನ್ನೂ ಕ್ಯಾನ್ಸಲ್ ಮಾಡಿಬಿಡಿ. ಅಲ್ಲಿಂದ ಇಲ್ಲಿಗೆ ಬರುವುದು ಬೇಡ, ಇಲ್ಲಿಂದ ಅಲ್ಲಿಗೆ ಹೋಗುವುದು ಬೇಡ. ಮೆಡಿಕಲ್ ಏಡ್‌ಗೆ ದೇಶದಲ್ಲಿ ಇಂತಹ ಒಂದು ಶಕ್ತಿ ಇದೆ, ಇಂತಹ ವಿದ್ಯೆ ಇದೆ ಎಂದು ಯಾರಾದರೂ ಬಂದವರಿಗೆ ಒಳ್ಳೆಯದಾಗಲಿ ಎಂದು ಬಯಸಿದವರಿಗೆ, ಒಳ್ಳೆಯದಾಗಲಿ ಎಂದು ಹೂವು ಕೊಟ್ಟವರಿಗೆ ನೀವು XXX ಎಂದು ಕರೆಯುತ್ತೀರಿ. XXX XXX ಇದು ಸರಿಯೇ ಎನ್ನುವುದನ್ನು ನೀವು ತೀರ್ಮಾನ ಮಾಡಿ.

XXX ಮಾನ್ಯ ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಈ ಪದವನ್ನು ಕಡತದಿಂದ ತೆಗೆದುಹಾಕಲಾಗಿದೆ.

ಗೊಂದಲ

ಶ್ರೀ ವಿಶ್ವೇಶ್ವರ ಹೆಗಡೆ : ಪಾಕಿಸ್ತಾನ XXX ಅಲ್ಲದೆ ಮಿತ್ರ ರಾಷ್ಟ್ರ ಎಂದು ಕರೆಯಲೇ?

ಗೊಂದಲ

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಘನತೆಗೆ ತಕ್ಕದಾಗಿ ಮಾತನಾಡಬೇಕಾಗುತ್ತದೆ.

ಗೊಂದಲ

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ನಾವು ಮಾತನಾಡುವಾಗ ಯಾವುದೇ ಲಕ್ಷ್ಮಣ ರೇಖೆಯನ್ನು ಬಿಟ್ಟು ಮಾತನಾಡುವುದಕ್ಕೆ ಹೋಗಬಾರದು. 21 ವರ್ಷ ಒಬ್ಬ ವ್ಯಕ್ತಿ ಆ ಜೈಲಿನಲ್ಲಿದ್ದು ಬಂದಿದ್ದಾನೆ. 21 ವರ್ಷ ಆ ಜೈಲಿನಲ್ಲಿ ಏಕೆ ಇಟ್ಟು ಕೊಂಡರು, XXX ಅಲ್ಲದಿದ್ದರೆ? ಅವನು ಇವತ್ತು ಬಂದಿದ್ದಾನೆ, ಅದನ್ನು ವಿವರಿಸುತ್ತಿದ್ದರೆ ಶಿವಕುಮಾರ್‌ರವರಿಗೆ ಏನಾಯಿತೋ ಗೊತ್ತಿಲ್ಲ. ನಾವೇನೂ ಈಗ ಪಾಕಿಸ್ತಾನದ ಜೊತೆ ಯುದ್ಧ ಮಾಡಿ ಎಂದು ಹೇಳಲಿಲ್ಲ. 21 ವರ್ಷಗಳ ಕಾಲ ಅವನು ಏನು ಬವಣೆ ಎದುರಿಸಿದ್ದಾನೆ. ಅದನ್ನು ವಿವರಿಸುತ್ತಾ ಸಹಜವಾಗಿ ಒಂದು ಮಾತು ಹೇಳಿದ್ದಕ್ಕೆ ನಮ್ಮನ್ನು XXX ಎಂದರೆ, ನಮ್ಮನ್ನು ಚುನಾಯಿಸಿದ ಆ ಜನಗಳೆಲ್ಲಾ XXX ಸ್ವಾಮಿ. ನಮ್ಮನ್ನು ಎಲೆಕ್ಷನ್‌ಗೆ ನಿಲ್ಲುವುದಕ್ಕೆ ಯಾರು ಬಿಟ್ಟರು? ಎಲೆಕ್ಷನ್ ಕಮೀಷನ್ ನಮ್ಮನ್ನು ಏಕೆ ಎಲೆಕ್ಷನ್‌ಗೆ ಕಂಟೆಸ್ಟ್ ಮಾಡುವುದಕ್ಕೆ ಬಿಟ್ಟಿತು? ಈಗ ಇವರು ಬಹಳ ಸೀರಿಯಸ್ ಅಲಿಗೇಷನ್ ಅನ್ನ ನಮ್ಮಗಳ ಮೇಲೆ ಮಾಡಿದ್ದಾರೆ. ಶ್ರೀ ಜ್ಞಾನೇಂದ್ರರವರ ಮೇಲೆ ಅಲಿಗೇಷನ್ ಮಾಡಿದರೆ ಇಡೀ ನಮ್ಮ ತಂಡಕ್ಕೆ ಮಾಡಿದ ಹಾಗೆ. ಈಗ ಅದನ್ನು ನಾನು ನಿಮ್ಮ ವಿವೇಚನೆಗೆ ಬಿಡುತ್ತೇನೆ. ಒಬ್ಬ ಸಚಿವರು ಬಹಳ ಗೌರವಾನ್ವಿತ ಸಚಿವರು, ಬಹಳ ಪ್ರಭಾವಶಾಲಿಗಳು ಸಚಿವರು, ಅವರ ಮಾತು ಎಷ್ಟೋ ನಡೆಯುತ್ತದೆ ಎಂದು ನಾನು ಕೇಳಿದ್ದೇನೆ. ಆ ಮಾತನ್ನು ದಯವಿಟ್ಟು ವಾಪಸ್ ತೆಗೆದುಕೊಳ್ಳಬೇಕೆಂದು ತಾವು ಆದೇಶ ಕೊಡಬೇಕೆಂದು ನಾನು ಕೇಳುತ್ತೇನೆ. ಒಳ್ಳೆಯ ಸಂದೇಶ ಈ ಸದನದಿಂದ ಹೋಗಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ಅವರು ಯಾವ ವಿಚಾರ ಬೇಕಿದ್ದರೂ ಪ್ರಸ್ತಾಪ ಮಾಡಲಿ, ಈ ರಾಜ್ಯದಲ್ಲಿ ನಮ್ಮಲ್ಲಿ ಒಂದು ದೊಡ್ಡ ಶಕ್ತಿ ಇದೆ, ವಿದ್ಯೆಯ ಬಗ್ಗೆ, ಆರೋಗ್ಯದ ಬಗ್ಗೆ, ಬೇಕಾದಷ್ಟು ಕರ್ನಾಟಕ ರಾಜ್ಯದ ಬಗ್ಗೆ ಖ್ಯಾತಿ ಇದೆ. ಇಲ್ಲಿ ಆದಂತಹ ಒಂದು ಆಪರೇಷನ್‌ಗೆ ನಮ್ಮ ಸರ್ಕಾರದ ವತಿಯಿಂದ ಒಬ್ಬ ಸಚಿವರು ಹೋಗಿ ಏನೋ ಒಂದು ಶುಭ ಕೋರಿ ಬಂದರೆ, ಯಾವುದೋ ಒಂದು ಮಗು ಇಲ್ಲಿಗೆ ಬಂದು ಮಾನವೀಯತೆಯಿಂದ ಆಪರೇಷನ್ ಮಾಡಿಸಿಕೊಂಡರೆ, ಇದು XXX ಎಂದು ಹೇಳಿದರೆ, ಆ ಪದ ಸರಿಯೇ? ಏನು ಹೇಳಿದ್ದು ನೀವು? .....

ಶ್ರೀ ಆರಗ ಜ್ಞಾನೇಂದ್ರ : ನೀವು ನಿದ್ರೆ ಮಾಡುತ್ತಿದ್ದರೋ ಏನೋ ಗೊತ್ತಿಲ್ಲ. ತಾವು ಸ್ವಲ್ಪ ಕೇಳಿ. ಮಂತ್ರಿಗಳು ಏನೇನೋ ಮಾತನಾಡಿದರೆ ಅದು ಸರಿ ಹೋಗುವುದಿಲ್ಲ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಈ ಭಾಗದ ಶಾಸಕರಿಗೆ ಅವರು XXX ಎಂದು ಹೇಳಿದ್ದಾರೆ. ಆ ಪದವನ್ನು ಅವರು ವಾಪಸ್ ತೆಗೆದುಕೊಳ್ಳಬೇಕು. ಅದರ ಬಗ್ಗೆ ತಾವು ಒಂದು ರೂಲಿಂಗ್ ಕೊಡಬೇಕು.

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಗೊಂದಲ

ಉಪಾಧ್ಯಕ್ಷರು : ಹೀಗೆ ಎಲ್ಲರೂ ಒಟ್ಟಿಗೆ ಮಾತನಾಡುತ್ತಿದ್ದರೆ ಅದು ರೆಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಎಶ್ವೇಶ್ವರ ಹೆಗಡೆ ಕಾಗೇರಿ : XXX XXX XXX ಆ ರಾಷ್ಟ್ರದ ಪರವಾಗಿ ಮಾತನಾಡುವುದು ನೋಡಿದರೆ, ಅವರು ದಿನಬೆಳಗಾದರೆ ನಮ್ಮ ಮೇಲೆ ಯುದ್ಧ ಮಾಡುತ್ತಿದ್ದಾರೆ, ಭಯೋತ್ಪದಕರಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ, ಭಾರತದ ಮೇಲೆ ಭಯೋತ್ಪಾದನೆ ಮಾಡುವವರಿಗೆ ತರಬೇತಿ ಶಿಬಿರ ನಡೆಸುತ್ತಿದ್ದಾರೆ. ಕಾರ್ಗಿಲ್‌ನಲ್ಲಿ ಯುದ್ಧ ಆಗಿದ್ದು ಮರೆತು ಹೋಯಿತೆ? ಅವರು ಮಿತ್ರ ರಾಷ್ಟ್ರದವರೆಗೆ XXX ಎನ್ನುವುದಕ್ಕೆ ಎಲ್ಲಾ ದಾಖಲೆಗಳಿವೆ. ಇಡೀ ರಾಷ್ಟ್ರವೇ ಪಾಕಿಸ್ತಾನವನ್ನು XXX ಎಂದು ಹೇಳುತ್ತದೆ. ಸ್ನೇಹ ಸಂಬಂಧ ಸುಧಾರಿಸಿಕೊಳ್ಳುವುದರ ಬಗ್ಗೆ ನಮ್ಮ ಎರಡನೇ ಮಾತಿಲ್ಲ. ನಮ್ಮ ಪಾಕಿಸ್ತಾನದ ಅಕ್ಕ ಪಕ್ಕ ರಾಷ್ಟ್ರಗಳ ಸ್ನೇಹ ಸಂಬಂಧ ಸುಧಾರಿಸಬೇಕು. ಅದರ ಬಗ್ಗೆ ಎರಡನೇ ಮಾತಿಲ್ಲ. ಆದರೆ ಅವರು XXX ಎನ್ನುವುದಕ್ಕೂ ಎರಡನೇ ಮಾತಿಲ್ಲ. ಇವತ್ತು ಅವರು ಅದೇ ರೀತಿ ವರ್ತನೆ ಮಾಡುತ್ತಿದ್ದಾರೆ. ಮಾನ್ಯ ಶಿವಕುಮಾರ್‌ರವರು ತಾವು ಹೇಳಿದ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು. ಮಾನ್ಯ ಉಪಾಧ್ಯಕ್ಷರೆ, ತಾವು ಡೈರೆಕ್ಷನ್ ಕೊಡಿ. ಅವರು ತಮ್ಮ ಮಾತನ್ನು ವಾಪಸ್ ತೆಗೆದುಕೊಳ್ಳಲಿ.

ಶ್ರೀ ಡಿ.ಕೆ. ಶಿವಕುಮಾರ್ : ಅವರು XXX XXX ನಾವು ಬಹಳ ಮಾನ್ಯತೆ ಕೊಟ್ಟಿದ್ದೇವೆ, ಎನ್ನುವುದನ್ನು ಅವರು ಅವರದೇ ಆದ ಮಾತಿನಲ್ಲಿ ಹೇಳಿದ್ದಾರೆ. ನಾವು ನೀವು XXX ಎಂದು ಹೇಳಿದ್ದಕ್ಕೆ XXX ಎಂದು ಹೇಳಿದ್ದು ಸತ್ಯ. ನಾನು ಮಾತನಾಡುವುದು ಸರಿ, ಅವರು ಮಾತನಾಡುವುದು ಸರಿ, ದಯವಿಟ್ಟು ಅವರು ನಿಯಮದಡಿಯಲ್ಲಿ ಏನು ಬೇಕಾದರೂ ತೆಗೆದುಕೊಂಡು ಬರಲಿ, ಇಲ್ಲಿ ಚರ್ಚೆಯಾಗಲಿ, ನನ್ನ ಉತ್ತರ ನಾನು ಯಾವ ರೀತಿ ಇಲ್ಲಿ ಪ್ರತಿಪಾದನೆ ಮಾಡಬೇಕೋ ಮಾಡುತ್ತೇನೆ, ಅವರು ಯಾವ ರೀತಿ ಪ್ರತಿಪಾದನೆ ಮಾಡುತ್ತಾರೆ ಮಾಡಲಿ, ಸಭೆ ಏನು ತೀರ್ಮಾನ ಮಾಡುತ್ತದೆ ಮಾಡಲಿ. ಅದಕ್ಕೆ ನಾವು ಸಿದ್ಧರಾಗಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು XXX ಎನ್ನುವ ಪದ ಪ್ರಯೋಗ ಮಾಡಿದ್ದಾರೆ. ಈ ಭಾಗದ ಜನ ಪ್ರತಿನಿಧಿಗಳಿಗೆ ಹಾಗೂ ಜವಾಬ್ದಾರಿಯಿಂದ ಜನರಿಂದ ಆಯ್ಕೆಯಾದ ಜನ ಪ್ರತಿನಿಧಿಗಳಿಗೆ XXX ಎನ್ನುವ ಪದ ಪ್ರಯೋಗ ಮಾಡಿದ್ದಾರೆ. ಅವರು ತಕ್ಷಣ ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ. ಏನು ತಿಳಿದುಕೊಂಡಿದ್ದಾರೆ ಇವರು? ಜನ ಪ್ರತಿನಿಧಿಗಳಿಗೆ ಇಲ್ಲಿ ಗೌರವ ಇಲ್ಲ. ತಾವು ಇದರ ಬಗ್ಗೆ ಒಂದು ನಿರ್ಣಯ ಕೊಡಬೇಕಾಗುತ್ತದೆ. ಒಬ್ಬ ಜವಾಬ್ದಾರಿ ಮಂತ್ರಿಯಾಗಿ ಜನ ಪ್ರತಿನಿಧಿಗಳಿಗೆ XXX ಎನ್ನುವ ಪದ ಪ್ರಯೋಗ ಮಾಡುತ್ತಾರೆ. ಅದನ್ನು ವಾಪಸ್ ತೆಗೆದುಕೊಳ್ಳದಿದ್ದರೆ, ಸದನದಲ್ಲಿ ದಬ್ಬಾಳಿಕೆ ನಡೆಯುತ್ತಿದೆ. ಈ ರೀತಿ ಪದ ಪ್ರಯೋಗ ಮಾಡಿ ಜನರಲ್ಲಿ ರಾಂಗ್ ಸಿಗ್ನಲ್ ಹೋಗುವಂತಹ ಕೆಲಸವನ್ನು ಶಿವಕುಮಾರ್ ರವರು ಮಾಡುತ್ತಿದ್ದಾರೆ. ಮಾನ್ಯ ಉಪಾಧ್ಯಕ್ಷರೆ,

---

XXX ಈ ಪದವನ್ನು ಮಾನ್ಯ ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ತಾವು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ತಕ್ಷಣವೇ ಅವರು ಆ ಪದವನ್ನು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ತಾವು ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳಬೇಕಾಗುತ್ತಿದೆ.

ಗೊಂದಲ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಉಪಾಧ್ಯಕ್ಷರೆ, ಸಂವಿಧಾನದ ಪ್ರಕಾರ ನಾವು ಈ ಸದನದಲ್ಲಿ ಇರುವುದಕ್ಕೆ ಸಾಧ್ಯವೇ ಹೇಳಿ.

ಗೊಂದಲ

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳು ಆವೇಶದಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಸದಸ್ಯರನ್ನು xxx ಎಂದು ಕರೆಯತಕ್ಕಂಥಾದ್ದು ಸರಿಯಲ್ಲ. ದಯವಿಟ್ಟು ಆ ವರ್ಡ್ ಅನ್ನು ಎಕ್ಸ್ ಪಂಜ್ ಮಾಡಿ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಸದಸ್ಯರು ಎಂದು ಅಲ್ಲ, ಒಂದು ನಿಮಿಷ ದಯವಿಟ್ಟು ಕೇಳಿ. ನಮ್ಮನ್ನು ಕುರಿತು ಅವರು xxxxxx ಬೆಂಬಲ ಕೊಡುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ.

ಗೊಂದಲ

ಶ್ರೀ ಡಿ.ಕೆ. ಶಿವಕುಮಾರ್ : ಕಡತ ತರಿಸಿ ನೋಡಿ.

ಗೊಂದಲ

ಉಪಾಧ್ಯಕ್ಷರು : ಈಗ ನಾನು ಹೇಳುತ್ತೇನೆ, ಕುಳಿತುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರು ಏನೂ ಆ ರೀತಿ ಹೇಳಿಲ್ಲ.

ಉಪಾಧ್ಯಕ್ಷರು : ಹೆಗಡೆಯವರೆ, xxx ನೀವು ಆ ರೀತಿ ಸಂಬೋದಿಸಿದ್ದು ನಿಜ. ಮಂತ್ರಿಗಳು ಮಾತನಾಡುವಾಗ xxx ಕೂಡ ಆ ಒಂದು ಪದ ಇಲ್ಲಿ ಪ್ರಯೋಗ ಆಗಿದೆ. ಈಗ ಏನು ನಡೆಯುತ್ತಿದೆ ಅದು ನಿಮಗೆ ಗೊತ್ತಿದೆ. ಅಕ್ಕಪಕ್ಕದವರೆಲ್ಲರೂ ಮಿತ್ರ ರಾಷ್ಟ್ರಗಳಾಗಬೇಕು ಎನ್ನುವ ವಾದ ಎಲ್ಲಾ ಕಡೆ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ನೀವು xxx ಆ ರೀತಿ ಹೇಳುವುದು ಸರಿಯಲ್ಲ. ಅವರು xxx ಆ ರೀತಿ ಹೇಳುವುದು ಸರಿಯಲ್ಲ. ಆದುದರಿಂದ ಎರಡೂ ಪದಗಳನ್ನು ನಾವು ತೆಗೆದು ಹಾಕಿದ್ದೇವೆ.

ಗೊಂದಲ

ಉಪಾಧ್ಯಕ್ಷರು : ಈ ಎರಡೂ ಪದಗಳನ್ನು ಕಡತದಿಂದ ತೆಗೆದು ಹಾಕಲು ಆದೇಶ ಮಾಡಿದ್ದೇನೆ. ಈ ವಿಷಯವನ್ನು ಇಲ್ಲಿಗೆ ಮುಗಿಸಿರಿ.

ಶ್ರೀ ಜಗದೀಶ್ ಶೆಟ್ಟರ್ : ಕಡತದಿಂದ ತೆಗೆದು ಹಾಕಿದಿರಿ. ಆದರೆ ಈ ರೀತಿ ಮಂತ್ರಿಗಳಾಗಿ ಮಾಡುವುದು ಸರಿಯೆ? ನಿಮಗಾದರೂ ಮನಸ್ಸು ಬರುತ್ತದೆಯೆ? ಅಂಥ xxx ಕೆಲಸ ಏನು ಮಾಡಿದ್ದೇವೆ? ಅದನ್ನು ಹೇಳಲಿ ಅವರು. ಬರೀ ಕಡತದಿಂದ ತೆಗೆದರೆ ಆಗುವುದಿಲ್ಲ, ಅವರು ಪದ ಪ್ರಯೋಗ ಮಾಡಿದ್ದನ್ನು ವಾಪಸ್ಸು ತೆಗೆದುಕೊಳ್ಳಲಿ. xxx ಎನ್ನುವಂತಾದ್ದು ಏನಿದೆ ಒಬ್ಬ ಜವಾಬ್ದಾರಿ ಮಂತ್ರಿಯಾಗಿ ಈ ರೀತಿ ಪದ ಪ್ರಯೋಗ ಮಾಡುವಂತಾದ್ದು...

---

xxx ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಗೊಂದಲ

ಶ್ರೀ ಆರಗ ಜ್ಞಾನೇಂದ್ರ : ನಾನೇನು ಮಾತನಾಡಿದ್ದೇನೆ ಎನ್ನುವುದನ್ನು ಕಡತ ತರಿಸಿ ನೋಡಬೇಕು. ತಾವು ರೆಕಾರ್ಡ್ ತರಿಸಿ ನೋಡಬೇಕು. ನಾನು ಜವಾಬ್ದಾರಿ ಯುತವಾದಂತಹ ಒಬ್ಬ ಶಾಸಕ. ಎರಡನೇ ಬಾರಿಗೆ ಈ ಸದನದಲ್ಲಿ ಕೆಲಸ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು : ಎಲ್ಲರಿಗೂ ಜವಾಬ್ದಾರಿ ಇದೆ. ಬೇಜವಾಬ್ದಾರಿ ಯಾರಿಗೂ ಇಲ್ಲ.

ಶ್ರೀ ಆರಗ ಜ್ಞಾನೇಂದ್ರ : ಮನಸ್ಸಿಗೆ ಬಂದ ಹಾಗೆ ನಾನು ಮಾತನಾಡುತ್ತಿಲ್ಲ. ಕರಿಯಣ್ಣನವರೇ ಪ್ಲೀಸ್....

ಶ್ರೀ ಕರಿಯಣ್ಣ : ಮಾನ್ಯ ಉಪಾಧ್ಯಕ್ಷರೆ, ನೀವು ಸದನದ ನಿಯಮಾವಳಿ ಪ್ರಕಾರ ಹೋಗಿ.

ಗೊಂದಲ

ಮಾನ್ಯ ಸದಸ್ಯರು : ಏನು ಹಾಗೆ ಮಾತನಾಡುತ್ತಿರಿ? ನಾಚಿಕೆಯಾಗುವುದಿಲ್ಲವೇ ನಿಮಗೆ?

ಗೊಂದಲ

ಶ್ರೀ ಡಿ.ಕೆ. ಶಿವಕುಮಾರ್ : ಉಪಾಧ್ಯಕ್ಷರೆ, ಯಾವ ರೂಲ್ ಕೆಳಗೆ ಬೇಕಾದರೂ ತೆಗೆದುಕೊಂಡು ಬನ್ನಿ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಏನು ಮಾತನಾಡಿದರೂ ನಡೆಯುತ್ತದೆ ಎಂದು ತಿಳಿದುಕೊಂಡಿದ್ದಾರೆ, ಆ ಮಂತ್ರಿಗಳಿಗೆ...

ಗೊಂದಲ

ಉಪಾಧ್ಯಕ್ಷರು : ಈಗಾಗಲೇ ಅವರು XXX ಎನ್ನುವುದನ್ನು ಮತ್ತು ಇವರು XXX ಎನ್ನುವುದನ್ನು ತೆಗೆದು ಹಾಕಿದ್ದೇನೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಆ ಪದವನ್ನು ವಾಪಸ್ಸು ತೆಗೆದುಕೊಳ್ಳಿ XXX ಎಂದು ಆಪಾದನೆ ಮಾಡಿದ್ದಾರೆ.

ಉಪಾಧ್ಯಕ್ಷರು : ಅವರು ಏನು ಮಾತನಾಡುತ್ತಾರೆ ನೋಡೋಣ ಕುಳಿತುಕೊಳ್ಳಿ, ನೀವೇ ಮಾತನಾಡಿದರೆ ಹೇಗೆ?

ಶ್ರೀ ಡಿ.ಕೆ. ಶಿವಕುಮಾರ್ : ಪಾಕಿಸ್ತಾನದಿಂದ ಬಂದಂತಹ ಒಂದು ಇನ್ಫೋಸೆಂಟ್ ಮಗುವಿಗೆ ಇಲ್ಲಿ ಬಂದು ಆರೋಗ್ಯ ಸುಧಾರಿಸಿ ಉತ್ತಮವಾದಾಗ, ಮಾಧ್ಯಮದಲ್ಲಿ ಅದು ಬಂದಾಗ, ಸರ್ಕಾರದಿಂದ ನಮ್ಮ ಪ್ರತಿನಿಧಿ ಹೋಗಿ, ನಮ್ಮ ಸ್ನೇಹಿತರು ಯಾರೋ ಒಬ್ಬರು ಫ್ರೆಂಡ್ ಹ್ಯುಮಾನಿಟಿ ಕನ್ಸಿಡರೇಷನ್‌ನಿಂದ ಅವರಿಗೆ ಶುಭ ಕೋರಿ ಬಂದಂತಹ ಸಂದರ್ಭದಲ್ಲಿ, ಅದನ್ನು ನೀವು XXX ಬಂದಂತಹವರಿಗೆ ಎಂತಹ ಕೆಲಸ ಬೇಕಾದರೂ ಮಾಡುತ್ತೀರಿ, ಪ್ರೋತ್ಸಾಹ ಕೊಡುತ್ತೀರಿ ಎಂದರೆ, ಈ ಸರ್ಕಾರಗಳೆಲ್ಲಾ XXX

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಗೊಂದಲ

ಶ್ರೀ ಆರಗ ಜ್ಞಾನೇಂದ್ರ : ಇಂತವರನ್ನೆಲ್ಲಾ ಮಂತ್ರಿ ಮಾಡಿಕೊಂಡು ಹೋದರೆ ಇಡೀ ಕರ್ನಾಟಕಕ್ಕೆ ನಾಚಿಕೆಗೇಡು.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಉಪಾಧ್ಯಕ್ಷರೆ, I am on point of order.

ಉಪಾಧ್ಯಕ್ಷರು : ಜೀರೋ ಅವರ್ ನಲ್ಲಿ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಈಗ ಒಬ್ಬ ಸದಸ್ಯರ ಬಗ್ಗೆ XXX ಎಂದರೆ ಆ XXX ಏಕೆ ಸ್ವಾಮಿ ಕೂರಿಸಿಕೊಂಡಿದ್ದೀರಿ? ಅವರನ್ನು ನೀವು ಹೊರಗಡೆ ಕಳುಹಿಸಿ. ಈಗ ನೀವು ಚೇರ್‌ನಲ್ಲಿ ಇದ್ದೀರಿ. ಒಬ್ಬ XXX ಈ ಸದನದಲ್ಲಿ ಇಟ್ಟುಕೊಳ್ಳಬಾರದು, ಅದು. ಮಹಾಪರಾಧವಾಗುತ್ತದೆ. will you send him out? ಬಹಳ ಸಿಂಪಲ್ ಕ್ವೆಶ್ಚನ್ ಇದು. XXX ಈ ಸದನದಲ್ಲಿ ಬರಬಾರದು. ಬಂದು ಕುಳಿತುಕೊಂಡು ಮಾತನಾಡುತ್ತಿದ್ದಾರೆ. ಅವರನ್ನು ನೀವು ಹೊರಗಡೆ ಕಳುಹಿಸಿ.

ಗೊಂದಲ

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಸಚಿವರು ಕ್ಷಮೆ ಕೇಳಬೇಕು. ನಾಚಿಕೆ ಆಗುವುದಿಲ್ಲವೆ? ಒಬ್ಬ ಸಚಿವರಾಗಿ ಏನು ಬೇಕಾದರೂ ಮಾತನಾಡಬಹುದೆ? ಅದಕ್ಕೆ ಒಂದು ಇತಿಮಿತಿ ಇಲ್ಲವೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಉಪಾಧ್ಯಕ್ಷರೆ, ಅವರು ಹೇಳಿದಂತಹ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಅವರು ತಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಅವರು ಏನು ತಿಳಿದುಕೊಂಡಿದ್ದಾರೆ.

ಗೊಂದಲ

ಉಪಾಧ್ಯಕ್ಷರು : ಎಲ್ಲರೂ ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ..

ಶ್ರೀ ಡಿ.ಕೆ. ಶಿವಕುಮಾರ್ : ಅವರೇ ಮೊದಲು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಯಾವುದೇ ಒಬ್ಬ ವ್ಯಕ್ತಿ ಬಗ್ಗೆ ಹೇಳಬೇಕಾದರೆ ನೋಟಿಸ್ ಕೊಡಬೇಕು. ಹಾಗಾದರೆ ಅವರು ನೋಟಿಸ್ ಕೊಟ್ಟಿದ್ದರಾ? ಇಲ್ಲಿ ಪ್ರಶ್ನೆ ಏನಿದೆ ಎಂದರೆ ಪಾಕಿಸ್ತಾನದ ಮಗುವಿಗೆ ಟ್ರೀಟ್‌ಮೆಂಟ್ ಕೊಟ್ಟ ಬಗ್ಗೆ, ಅವರ ಆತಿಥ್ಯ ನೋಡಿಕೊಂಡ ಬಗ್ಗೆ ಸರ್ಕಾರ ಹೋಗಿ ಒಂದು ಪರಿಹಾರ ಕೊಟ್ಟ ಬಗ್ಗೆ, ಸೌಜನ್ಯ ವ್ಯಕ್ತಪಡಿಸಿದ ಬಗ್ಗೆ ನಮ್ಮದು ಯಾರದೂ ತಕರಾರು ಇಲ್ಲ. ಅದರ ಬಗ್ಗೆ ಪ್ರಶ್ನೆಯೇ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇವರೇನು ಹೇಳುತ್ತಿದ್ದಾರೆ ಎಂದರೆ ಇಲ್ಲಿ ಇದ್ದಂತಹವರು ಶಾಸಕರು XXX ಎನ್ನುವ ಪದ ಪ್ರಯೋಗ ಮಾಡಿದರು. ಹಾಗಾದರೆ ಸದನದಲ್ಲಿ ಇದ್ದಂತಹ ಯಾರೇ ಒಬ್ಬ ಶಾಸಕರಿರಬಹುದು, ಯಾರೇ ಮಂತ್ರಿ ಇರಬಹುದು ಅವರ ಬಗ್ಗೆ ಏನಾದರೂ ಆಪಾದನೆ ಮಾಡಬೇಕಾದರೆ ಮೊದಲೇ ಅದರ ಬಗ್ಗೆ ಒಂದು ನೋಟೀಸ್ ಕೊಡಬೇಕು. ಇದೊಂದು ರೂಲ್ಸ್. XXX ಎಂದು ಹೇಳುವಾಗ ಅದರ ಬಗ್ಗೆ ಏನಾದರೂ ನೋಟೀಸ್ ಕೊಟ್ಟಿದ್ದರಾ? ಹಾಗಾದರೆ ನಾವು XXX ಗಳಾದರೆ ನಮಗೆ ಇಲ್ಲಿ ಕುಳಿತು ಕೊಳ್ಳುವುದಕ್ಕೆ ಹಕ್ಕು ಇದೆಯೇ?

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಉಪಾಧ್ಯಕ್ಷರು : ಮುಗಿಯಿತೇ ನಿಮ್ಮದು? ಈಗ ನೀವು ಹೇಳಿದ್ದೆಲ್ಲಾ ಗೊತ್ತಾಯಿತು. ಲಾ ಮಿನಿಸ್ಟರ್ ಏನೋ ಹೇಳುತ್ತಾರೆ, ಕೇಳಿ.

ಶ್ರೀ ಆರಗ ಜ್ಞಾನೇಂದ್ರ : ನಾನು ಸರ್ಕಾರ ಏನು ಮಾಡಿದೆ ಅದನ್ನು ಅಪ್ರೀಷಿಯೇಟ್ ಮಾಡಿದ್ದೇನೆ. ಆ ಮಗುವಿಗೆ ಹೋಗಿ ಕೊಟ್ಟಂತಹ ನೆರವು, ಆ ಮಗುವನ್ನು ನಮ್ಮ ರಾಜ್ಯದಲ್ಲಿ ನೋಡಿಕೊಂಡಿರತಕ್ಕಂಥ ರೀತಿಯ ಬಗ್ಗೆ, ಮಾಧ್ಯಮಗಳ ಬಗ್ಗೆ ಸದಭಿಪ್ರಾಯವನ್ನು ಸೂಚಿಸಿ, ಆ ನಾರಾಯಣನ ಬಗ್ಗೆ ಈ ರೀತಿ ಮಾಡಬೇಕು ಎನ್ನುವ ಒಂದು ಇರಾದೆಯೇ ಹೊರತು ಬೇರೆ ಏನೂ ಇಲ್ಲ. ಒಂದು XXX ದಿಂದ ಒಂದು ಮಗು ಬಂದರೂ ಕೂಡ ಇಷ್ಟೊಂದು ಹೃದಯವಂತಿಕೆಯನ್ನು ನಮ್ಮ ಸರ್ಕಾರ ಪ್ರದರ್ಶನ ಮಾಡಿದೆ ಎನ್ನುವುದನ್ನು ಹೇಳಿದ್ದೇನೆ. ಮಾನ್ಯ ಸಚಿವರು ಯಾವ ಅಮಲಿನಲ್ಲಿ ಇದ್ದರೋ ಗೊತ್ತಾಗಲಿಲ್ಲ. ಇದ್ದಕ್ಕಿದ್ದ ಹಾಗೆ ಎದ್ದು XXX ಎಂದು ಹೇಳಿದ್ದಾರೆ. ಅವರು ಆ ಮಾತನ್ನು ವಾಪಸ್ಸು ತೆಗೆದುಕೊಂಡು ಅದಕ್ಕೆ ಕ್ಷಮಾಪಣೆ ಕೇಳುವವರೆಗೂ ಧರಣಿ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮಂತ್ರಿಗಳು ನೀಡಿದ ಬೇಜವಾಬ್ದಾರಿ ಹೇಳಿಕೆಯನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ.

2.00 ಪಿ ಎಂ

ಮಾನ್ಯ ಮುಖ್ಯಮಂತ್ರಿಯವರು ಇವರನ್ನು ಮಂತ್ರಿ ಪದವಿಯಿಂದ ತೆಗೆಯಬೇಕಾಗುತ್ತದೆ, ಇವರು ಏನು ತಿಳಿದುಕೊಂಡಿದ್ದಾರೆ, ಇವರು ಮಂತ್ರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ ಅಥವಾ ಏನು ಮಾಡುತ್ತಿದ್ದಾರೆ. ತಾವು ಆ ಪದವನ್ನು ತೆಗೆದುಕೊಳ್ಳಬೇಕಾಗುತ್ತದೆ, XXX ಪದವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು.

– ಗೊಂದಲ –

(ಬಿ.ಜೆ.ಪಿ. ಸದಸ್ಯರುಗಳು ಸದನದ ಬಾವಿಗೆ ಬಂದರು)

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಅವರು ಅವರ ಪಕ್ಷದ, ಅವರ ಸಿದ್ಧಾಂತ, ಅವರ ಗುಂಪಿನಿಂದ, ಏನಾದರೂ ನಿಲುವನ್ನು ತೆಗೆದುಕೊಳ್ಳಲಿ, ಅವರು, ಪಕ್ಕದ ರಾಷ್ಟ್ರದ ಮಗುವಿಗೆ ಬೆಂಬಲ ಕೊಟ್ಟಂತಹ ರಾಷ್ಟ್ರವನ್ನು XXX ಎಂದು ಹೇಳಿದ್ದಾರೆ. ಈ ರೀತಿ ಭಾರತ ಸರ್ಕಾರ ಏನಾದರೂ ಘೋಷಣೆ ಮಾಡಿದ್ದರೆ, ನಾವು ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ. ಮೊದಲು XXX ಎಂದು ಪಾಕಿಸ್ತಾನವನ್ನು ಭಾರತ ಸರ್ಕಾರ ಏನಾದರೂ ಘೋಷಣೆ ಮಾಡಿದೆಯೇ? ಅದನ್ನು ತೀರ್ಮಾನ ಮೊದಲು ಮಾಡಲಿ, ಅನಂತರ ಕ್ಷಮಾಪಣೆ, ಮತ್ತೊಂದು ಬೇರೆ ವಿಚಾರ.

ಶ್ರೀ ಜಗದೀಶ್ ಶೆಟ್ಟರ್ : XXX ಎನ್ನುವ ಪದ ಪ್ರಯೋಗವನ್ನು ಏಕೆ ಮಾಡಿದರು? ಅದನ್ನು ಅವರು ಹೇಳಲಿ, ಒಬ್ಬ ಶಾಸಕರಿಗೆ XXX ಎನ್ನುವ ಪದ ಪ್ರಯೋಗವನ್ನು ಮಾಡಿದ್ದಾರಲ್ಲಾ, ಅದು ಮೊದಲು ನಿರ್ಧಾರವಾಗಲಿ, ಯಾರ್ಯಾರು XXX ಎಂಬುದು ನಿರ್ಧಾರವಾಗಿ ಬಿಡಲಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೇ, ನಾವು ಏನಾದರೂ ಹೇಳುವುದಕ್ಕೆ ಅವಕಾಶ ಇದೆಯೇ?

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಉಪಾಧ್ಯಕ್ಷರು : ಅವಕಾಶ ಇದೆ, ಮಾತನಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೇ, ಪ್ರತಿನಿತ್ಯ ಒಂದಲ್ಲ ಒಂದು ಘಟನೆಗಳು,... ಒಂದಲ್ಲ ಒಂದು ಕಾರಣಕ್ಕಾಗಿ..

– ಗೊಂದಲ –

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೇ, XXX ಶಾಸಕರು ಈ ಸದನದಲ್ಲಿ ಇರುವುದಕ್ಕೆ ಸಾಧ್ಯವೇ? ಅದನ್ನು ಹೇಳಿ ಸಚಿವರಾಗಿ ಜಿಗಿದಾಡುತ್ತಿದ್ದಾರೆ. ನೀವು ಮಾನ್ಯ ಸಚಿವರಿಗೆ ಸ್ವಲ್ಪ ಬುದ್ಧಿ ಹೇಳಿ, ಇಲ್ಲಿ ಏನು ಹೇಳುತ್ತಿರಾ, ಅಲ್ಲಿ ಹೇಳಿ,

ಗೊಂದಲ

ಉಪಾಧ್ಯಕ್ಷರು : ಈಗ ಮಾನ್ಯ ಸಂಸದೀಯ ಸಚಿವರು ಮಾತನಾಡುತ್ತಿದ್ದಾರೆ, ಆದುದರಿಂದ ದಯವಿಟ್ಟು ಎರಡು ಕಡೆಯ ಮಾನ್ಯ ಸದಸ್ಯರುಗಳು ಕೇಳಿ, ಮಾನ್ಯ ಸಚಿವರೇ ತಾವು ಮಾತನಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೇ, ಸಂಸದೀಯ ನಡವಳಿಕೆಗಳಲ್ಲಿ ಕೊಡುವುದು, ತೆಗೆದುಕೊಳ್ಳುವುದು, ಇದು ಸಹಜವಾದಂತಹ ಕ್ರಿಯೆ. ಒಂದೊಂದು ಸಲ ಉತ್ಪ್ರೇಕ್ಷೆಗೆ ಅವಕಾಶವಾಗುವಂತಹ ಸಂದರ್ಭಗಳು ಬರಬಹುದು. ಇಲ್ಲಿ ಬಳಸಿದ ಎರಡೂ ಶಬ್ದಗಳನ್ನು ತಾವು ಕಡತದಿಂದ ತೆಗೆದುಹಾಕಿಸಿದ್ದೀರಿ. ಅದು ಈಗ ಸದನದ ಆಸ್ತಿಯಾಗಿ ಉಳಿದಿಲ್ಲ, ಪುನಃ ಪುನಃ ನಾವೇ ಅದೇ ವಿಷಯವನ್ನು ಪ್ರಸ್ತಾಪ ಮಾಡುತ್ತಾ ಹೋದರೆ, ನಾವು ಸಂಸದೀಯ ನಡವಳಿಕೆಯಂತೆ ಸದನವನ್ನು ನಡೆಸುವುದಕ್ಕೆ ಆಗುತ್ತದೆಯೇ? ಇದು ಮೊದಲನೆಯ ಪ್ರಶ್ನೆ. ಎರಡನೆಯದಾಗಿ ಇಲ್ಲಿ ಅವರು ಈ ವಿಷಯವನ್ನು ಪ್ರಸ್ತಾಪ ಮಾಡಿರುವಂಥಾದ್ದು ಶೂನ್ಯವೇಳೆಯಲ್ಲಾದರೂ, ನಾನು ತಮ್ಮಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಆ ವ್ಯಕ್ತಿಗೆ ಪಾಕಿಸ್ತಾನದ ಸೆರೆಮನೆಯಲ್ಲಿ ಶಿಕ್ಷೆ ಆಗಿದೆಯೋ, ಇಲ್ಲವೋ, ಅದು ಪ್ರಾಸಂಗಿಕವಾಗಿ ನಮಗೆ ಗೊತ್ತಿರುವ ವಿಚಾರ. ಇದನ್ನು ಸಭೆಯ ಗಮನಕ್ಕೆ ತರಬಹುದಷ್ಟೆ. ಆದರೆ ನಮಗೆ ಇದು ಗೊತ್ತಿಲ್ಲ, ಇದಕ್ಕೆ ಬೇಕಾದಂತಹ ದಾಖಲೆಗಳು ಬೇಕಾಗುತ್ತದೆ. ಅವರು 21 ವರ್ಷಗಳು ಜೈಲಿನಲ್ಲಿದ್ದರೆಂದರೆ ಇದರ ಬಗ್ಗೆ ಎಲ್ಲರಿಗೂ ಸಿಂಪತಿ ಇದೆ. ಸರ್ಕಾರ ಏನು ಮಾಡಬಹುದು, ಎಂಬುದು ಪ್ರಶ್ನೆ, ಈ ವಿಚಾರದಲ್ಲಿ ನಿಜವಾಗಿ ಆತನಿಗೆ ಇದ್ದ ತೊಂದರೆಗಳು ಒಂದು ದೇಶದಲ್ಲಿ, ರಾಷ್ಟ್ರದಲ್ಲಿ ಆಗಿದ್ದರೆ, ಕಾರಣಗಳು ಏನು, ಅಥವಾ ಬೇರೆ ಏನು ಎಂಬುದನ್ನೆಲ್ಲಾ ನೋಡಬೇಕಾಗುತ್ತದೆ. ಇದಕ್ಕೆ ಕೇಂದ್ರ ಸರ್ಕಾರ ಉತ್ತರವನ್ನು ಹೇಳಬೇಕು. ಇಲ್ಲಿ ರಾಜ್ಯ ಸರ್ಕಾರದಲ್ಲಿ ನಾವು ಏಕೆ ವ್ಯಾಜ್ಯ ಮಾಡುತ್ತಿದ್ದೇವೆಂಬುದು ಗೊತ್ತಿಲ್ಲ, ಕೇಂದ್ರ ಸರ್ಕಾರದವರು ಇಂತಹ ಮಾಹಿತಿಗಳನ್ನು ಸಂಪೂರ್ಣವಾಗಿ ತರಿಸಿ, ಅವರಿಂದ ನಾವು ಏನೇನು ನಿರೀಕ್ಷೆ ಮಾಡುತ್ತೇವೆ. ಅದಕ್ಕೆಲ್ಲಾ ಉತ್ತರ ಸಿಕ್ಕರೆ, ನಾವು ಏನಾದರೂ ಉತ್ತರವನ್ನು ಹೇಳಬಹುದು. ನಾವು ಇಲ್ಲಿ ಏಕಾಏಕಿ ಇಂತಹ ವಿಚಾರಗಳನ್ನು ಚರ್ಚೆ ಮಾಡಿದರೆ, ಇಂತಹ ಘಟನೆಗಳಿಗೆ ಅವಕಾಶವಾಗುತ್ತದೆ. ನಾವು ಯಾರನ್ನೂ ಶತ್ರು ರಾಷ್ಟ್ರವೆಂದು ಹೇಳಿಲ್ಲ, ಯಾರನ್ನೂ ಮಿತ್ರ ರಾಷ್ಟ್ರವೆಂದು ಹೇಳಿಲ್ಲ, ಒಂದು ಕಡೆ ಇಂತಹ ಪ್ರಚೋದನಾಕಾರಿ ವಿಚಾರಗಳು ಬಂದಾಗ, ನಾನು ಪ್ರತಿಪಕ್ಷದ ಮುಖಂಡರಲ್ಲಿ ಏನು ಮನವಿಯನ್ನು ಮಾಡುತ್ತೇನೆಂದರೆ, ಈಗ ನಾವು ಯಾವುದನ್ನು ಕಡತದಿಂದ ತೆಗೆದುಹಾಕುತ್ತೇವೆ, ಅಲ್ಲಿಗೆ ಅದು ಮುಗಿದು ಹೋಗಬೇಕು,

---

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಅದನ್ನು ಮುಂದುವರೆಸುವುದು ಸರಿಯೆಂದು ಕಾಣುವುದಿಲ್ಲ. ಈಗ ಕಡತದಲ್ಲಿ ಇಲ್ಲದೇ ಇರುವ ವಿಚಾರವನ್ನು ವ್ಯಾಖ್ಯಾನ ಮಾಡುತ್ತಾ ಹೋದರೆ, ಸರಿಯಲ್ಲ. ನಾನು ಅವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಪ್ರತಿನಿತ್ಯ ಸದನದಲ್ಲಿ ಒಂದಲ್ಲ ಒಂದು ಕಾರಣಕ್ಕಾಗಿ ನಮ್ಮ ಸದನದಲ್ಲಿ ಇಂತಹ ಪ್ರಸಂಗಗಳು ನಡೆಯುತ್ತಿರುವಂಥಾದ್ದು, ನಮಗೇ ಆಗಲಿ, ಅವರಿಗೇ ಆಗಲಿ, ಈ ಸದನಕ್ಕಾಗಲೀ, ಶೋಭೆ ತರುವಂತಹ ವಿಚಾರವಲ್ಲ. ಸಣ್ಣ ಸಣ್ಣ ವಿಚಾರಗಳ ಬಗ್ಗೆ ಸದನದಲ್ಲಿ ಬೇಕಾದಷ್ಟು ಚರ್ಚೆ ಆಗಿವೆ. ಈಗ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇಂತಹ ವಿಚಾರಗಳನ್ನು ತಲೆಗೆ ಹಾಕಿಕೊಳ್ಳದೇ, Let us proceed according to the procedure ಅದಕ್ಕೆ ಪ್ರತಿಪಕ್ಷದ ನಾಯಕರು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಕಡತದಲ್ಲಿ ಇದ್ದರೆ ಆ ಮಾತು ಬೇರೆ. ಪುನಃ ಅದೇ ವಿಷಯವನ್ನು ಪ್ರಸ್ತಾಪ ಮಾಡುವಂಥಾದ್ದು, ಇದು ಪ್ರಚಾರಕ್ಕೆ ದಾರಿಯಾದಂತೆ ಆಗುತ್ತದೆ, ಈಗ ಇದನ್ನು ಕಡತದಿಂದ ತೆಗೆದುಹಾಕಿದ್ದಾರೆ. ಒಂದು ವೇಳೆ ಅಂತಹ ಪ್ರಸಂಗವೇನಾದರೂ ಇದ್ದರೆ ನಾನು ಸಂಸದೀಯ ಮಂತ್ರಿಯಾಗಿ, ಇಂತಹ ಪ್ರಸಂಗಗಳು ಆಗದ ಹಾಗೆ ನಾನು ನಮ್ಮ ಕಡೆಯಿಂದ ನೋಡಿಕೊಳ್ಳುತ್ತೇನೆ, ಒಂದು ವೇಳೆ ಹಾಗೆ ಆಗಿದ್ದರೆ, ಇಲ್ಲಿ ವಿಷಾದವನ್ನು ವ್ಯಕ್ತಪಡಿಸಿ, ಇದನ್ನು ಇಲ್ಲಿಗೆ ಮುಗಿಸೋಣ.

ಉಪಾಧ್ಯಕ್ಷರು : ದಯವಿಟ್ಟು ಈ ವಿಷಯವನ್ನು ಇಲ್ಲಿಗೆ ಮುಗಿಸಿ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೇ, ನಾವು ಇಲ್ಲಿ ಮಾತನಾಡುವುದು ಬೇಡವೇ?

ಉಪಾಧ್ಯಕ್ಷರು : ಯಾರು ಹೇಳಿದರು ಬೇಡವೆಂದು.. ಮಾತನಾಡಿ..

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಚಂದ್ರೇಗೌಡರು, ಇದು ಒಂದು ಸಣ್ಣ ಘಟನೆ ಎಂದು ಹೇಳೀದರು, ಇದು ಸಣ್ಣ ಘಟನೆಯಲ್ಲ, ನಾವು ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಸಾಕಷ್ಟು ಅಸಂಸದೀಯ ಪದಗಳು ಇಲ್ಲಿ ಉಪಯೋಗವಾಗುವಂಥದ್ದನ್ನು ನಾವು ನೋಡಿದ್ದೇವೆ. ಆಗ ಸಭಾಧ್ಯಕ್ಷರು, ಅದನ್ನು ಕಡತದಿಂದ ತೆಗೆದುಹಾಕಿರುವುದನ್ನು ನೋಡಿದ್ದೇವೆ. ಆದರೆ ಇಲ್ಲಿ ಈಗ ಚರ್ಚೆ ನಡೆಯುವಂತಹ ಸಂದರ್ಭದಲ್ಲಿ ಒಬ್ಬ ಜವಾಬ್ದಾರಿ ಇರುವಂತಹ ಮಂತ್ರಿಗಳು, ಈ ರೀತಿಯ ಪದ ಪ್ರಯೋಗ ಮಾಡುವಂಥಾದ್ದು, ಇದು ಒಂದು ಗಂಭೀರವಾದಂತಹ ಆಪಾದನೆ ಎಂದು ನಾನು ಹೇಳುವಂಥಾದ್ದು. ಇದನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಈ ರೀತಿಯಾಗಿ ಗಂಭೀರವಾಗಿ ಆಪಾದನೆಯನ್ನು ಮಾಡುವಂತಹ ಸಂದರ್ಭದಲ್ಲಿ, ಯಾವ ಹಿನ್ನೆಲೆಯಲ್ಲಿ, ಮಾಡಿದರು ಏನೆಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಅದು ಉದ್ವೇಗದಿಂದ ಮಾಡಿದ್ದಾರೋ, ಅಥವಾ ಏನು ಎನ್ನುವಂಥಾದ್ದನ್ನು ನಾವು ವಿಚಾರ ಮಾಡಬೇಕಾಗುತ್ತದೆ ಮಾನ್ಯ ಚಂದ್ರೇಗೌಡರು, ಆ ರೀತಿಯಾಗಿ ಆಗಿದ್ದರೆ ನಾವು ವಿಷಾದವನ್ನು ವ್ಯಕ್ತಪಡಿಸುತ್ತೇವೆನ್ನುವ ಮಾತನ್ನು ಹೇಳಿದರು. ಈ ಒಂದು ಸೌಜನ್ಯ ಸಂಬಂಧಪಟ್ಟ ಮಾನ್ಯ ಮಂತ್ರಿಯವರಲ್ಲಿ ಬರುತ್ತಿಲ್ಲ. ಆಗಲೇ ಇಷ್ಟನ್ನು ಹೇಳಿಬಿಟ್ಟಿದ್ದರೆ, ವಿಷಯ ಮುಗಿದು ಹೋಗುತ್ತಿತ್ತು. ಇಲ್ಲಿ ಮಾನ್ಯ ಮಂತ್ರಿಯವರು ಹೇಳಲಿಲ್ಲ, ಅವರು ಹೇಳಬೇಕಾಗುತ್ತದೆ. ಇನ್ನೂ ಅವರ ಮನಸ್ಸಿನಲ್ಲಿ ಏನಿದೆ, ಎಂಬುದು ಗೊತ್ತಾಗುತ್ತಿಲ್ಲ.

ಗೊಂದಲ

ಉಪಾಧ್ಯಕ್ಷರು : ಮಾನ್ಯ ಚಂದ್ರೇಗೌಡರು ಏನು ಹೇಳಿದ್ದಾರೆಂದರೆ..

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಡಿ, ಈಗ ಸರ್ಕಾರದ ಪರವಾಗಿ ವಿಷಾದವನ್ನು ವ್ಯಕ್ತಪಡಿಸಿದ ಮೇಲೆ ಇದು ಮುಗಿಯಿತು, ಪುನಃ ಈ ರೀತಿ ಮಾಡುವುದು ಸರಿಯಲ್ಲ.

ಉಪಾಧ್ಯಕ್ಷರು : ಈಗ ಮುಂದೆ ಈ ರೀತಿಯಾಗದಂತೆ ನೋಡಿಕೊಳ್ಳುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಾರೆ, ಇಷ್ಟಕ್ಕೆ ಈ ವಿಷಯವನ್ನು ಮುಗಿಸಿ, ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಬನ್ನಿ.

ಗೊಂದಲ

ಉಪಾಧ್ಯಕ್ಷರು : ಆಯಿತು, ದಯವಿಟ್ಟು ನಿಮ್ಮ ನಿಮ್ಮ ಸ್ಥಾನಗಳಿಗೆ ಬನ್ನಿ.

ಶ್ರೀ ಜಗದೀಶ್ ಶೆಟ್ಟರ್ : ಸಂಬಂಧಪಟ್ಟ ಸಚಿವರು ಅದರ ಬಗ್ಗೆ ಒಂದು ವಿಷಾದ ವ್ಯಕ್ತಪಡಿಸಲು ತಯಾರಿಲ್ಲ. ಸರ್ಕಾರ ತಪ್ಪು ಮಾಡಿದ್ದೋ ಅಥವಾ ಮಂತ್ರಿಗಳು ತಪ್ಪು ಮಾಡಿದ್ದೋ, ಇದೇನೆಂದು ನನಗೆ ಅರ್ಥವಾಗುತ್ತಿಲ್ಲ. ನಾನು ವಿಷಾದ ಹೇಳುವುದಿಲ್ಲ ಎಂದು ಅವರು ಈಗಲೂ ಹೇಳುತ್ತಿದ್ದಾರೆ. ಏಕೆ ಅವರು ಈ ರೀತಿ ಹಠ ಮಾಡುತ್ತಿದ್ದಾರೆ ಎಂದು ಗೊತ್ತಾಗುತ್ತಿಲ್ಲ. ಈ ರೀತಿಯಾದ ಗಂಭೀರವಾದ ಆಪಾದನೆ ಮಾಡಿ..

ಉಪಾಧ್ಯಕ್ಷರು : ಸಂಸದೀಯ ಸಚಿವರು ಹೇಳಿದ್ದಾರೆ. ಅದನ್ನು ಅವರ ಪರವಾಗಿ ಎಂದು ತಿಳಿದುಕೊಳ್ಳಿ. ಇನ್ನು ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳುತ್ತೇನೆ ಎಂದು ಸರ್ಕಾರದ ಪರವಾಗಿ ವಿಷಾದ ವ್ಯಕ್ತಪಡಿಸಿದ್ದಾರೆ. ನೀವು ಏಕೆ ಅದನ್ನು ಸೀರಿಯಸ್ ಆಗಿ ಬೆಳೆಸುತ್ತಿದ್ದೀರಿ. ಆಯಿತು, ನಿಮ್ಮ ನಿಮ್ಮ ಸ್ಥಾನಗಳಿಗೆ ಬನ್ನಿ.

ಶ್ರೀ ಜಗದೀಶ್ ಶೆಟ್ಟರ್ : ಶಿವಕುಮಾರ್ ರವರು ಏನೋ ಹೇಳುತ್ತಿದ್ದಾರೆ ಕೇಳೋಣ.

ಶ್ರೀ ಡಿ.ಕೆ. ಶಿವಕುಮಾರ್ : ಇವರು ಬರೀ ಒಂದು ಕಡೆ ವಾದ ಮಾಡುತ್ತಿದ್ದಾರೆ. ಸಂತೋಷ. ಆದರೆ, ಅವರು ಮಾತನಾಡುವಾಗ, ಈ ಸರ್ಕಾರ XXX ಬೆಂಬಲ ಕೊಡುತ್ತಿದೆ, ಶುಭ ಕೋರುತ್ತಿದೆ ಎಂದು.....

ಗೊಂದಲ

ಶ್ರೀ ಡಿ.ಕೆ. ಶಿವಕುಮಾರ್ : ಒಂದು ನಿಮಿಷ, ನಾನು ಹೇಳುವುದನ್ನು ಕೇಳಿ.

ಗೊಂದಲ

ಮಾನ್ಯ ಸದಸ್ಯರು : ನೀವು ಹೊರಗೆ ಬಂದು ಮಾತನಾಡಿ. ನೀವು ಬಾವಿಯಲ್ಲಿ ನಿಂತುಕೊಂಡು ಮಾತನಾಡಬಾರದು. ಅಲ್ಲಿ ಇದ್ದು ಮಾತನಾಡಲು ನಿಮಗೆ ಹಕ್ಕಿಲ್ಲ.

ಗೊಂದಲ

ಉಪಾಧ್ಯಕ್ಷರು : ಶಿವಕುಮಾರ್ ರವರನ್ನು ಮಾತನಾಡಿ ಎಂದು ಹೇಳುತ್ತೀರಿ, ಆದರೆ ಅವರು ಮಾತನಾಡುವುದನ್ನು ಕೇಳಲು ತಯಾರಿಲ್ಲ, ಸ್ವಲ್ಪ ತಡೆಯಿರಿ, ಅವರು ಏನು ಮಾತನಾಡುತ್ತಾರೆ ಎಂದು ಕೇಳಿ.

XXX ಈ ಪದಗಳನ್ನು ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಗೊಂದಲ

ಶ್ರೀ ಡಿ.ಕೆ. ಶಿವಕುಮಾರ್ : ಆಯಿತು, ಯುದ್ಧ ಮಾಡುವಿರಂತೆ ನೀವು. ಎಲೆಕ್ಷನ್ ಬಂದಾಗಲೆಲ್ಲಾ ಯುದ್ಧ ಮಾಡುತ್ತಿರುತ್ತೀರಿ. ಅವರು ಮಾತನಾಡುವಾಗ ನಾವು ಗಂಭೀರವಾಗಿ ಕೇಳಿದ್ದೇವೆ. ಅವರು ಬಯ್ದುದನ್ನೆಲ್ಲಾ ಬಯ್ಯಿಸಿಕೊಂಡಿದ್ದೇವೆ. ಬೆಂಬಲ ಕೊಟ್ಟವರದನ್ನೂ ನೋಡಿದ್ದೇವೆ, ಇದೆಲ್ಲಾ ಇದೆ. ಅವರು ಏನು ಹೇಳಿದರು, XXX ಎಂದು ಅವರು ಯಾವ ಕಾಂಟೆಕ್ಸ್ಟ್‌ನಲ್ಲಿ ಕರೆದರು? XXX ಅವರಿಗೆ ಹೂವು ಕೊಟ್ಟರು, ಶುಭ ಕೋರಿದರು ಎಂದು ಹೇಳಿದರು. ಅವರು ಮಾಡಿರುವಂಥಾದ್ದು ಗಂಭೀರವಾದ ಆರೋಪ ಅಲ್ಲ. ಈಗ ನಾನು ಮಾಡುತ್ತಿದ್ದೇನೆ, ಈ ಸರ್ಕಾರ XXX ಕ್ಕೆ ಬೆಂಬಲ ಕೊಟ್ಟಿತ್ತು ಎನ್ನುವ ಮಾತನ್ನು ಅವರು ಯಾವ ಹಿನ್ನಲೆಯಲ್ಲಿ ಮಾತನಾಡಿದರು? ಅದು ಮೊದಲು ತೀರ್ಮಾನವಾಗಬೇಕು. ಅಂದರೆ, ಈ ಸರ್ಕಾರ XXX ಕ್ಕೆ ಬೆಂಬಲ ಕೊಟ್ಟಿತೇ ಎನ್ನುವುದು ಮೊದಲು ತೀರ್ಮಾನವಾಗಬೇಕು. XXX ಎಂದು ಘೋಷಣೆ ಮಾಡಲಿಕ್ಕೆ ಇವರಿಗೆ ಅಧಿಕಾರ ಕೊಟ್ಟವರ್ಯಾರು? ಡಿಪ್ಲೊಮ್ಯಾಟ್ಸ್‌ಗಳನ್ನು ಏಕೆ ಅಲ್ಲಿಗೆ ಕಳುಹಿಸುತ್ತಿದ್ದೀರಿ? ಅಂಬಾಸಿಡರ್‌ಗಳನ್ನು ಏಕೆ ಅಲ್ಲಿಗೆ ಕಳುಹಿಸುತ್ತಿದ್ದೀರಿ? ಬಸ್ಸುಗಳನ್ನು ಏಕೆ ಕಳುಹಿಸುತ್ತಿದ್ದೀರಿ? ವಿಮಾನಗಳನ್ನು ಏಕೆ ಕಳುಹಿಸುತ್ತಿದ್ದೀರಿ? ಅದನ್ನು ಮೊದಲು ನೀವು ತೀರ್ಮಾನ ಮಾಡಬೇಕು. ಇದೇ ಮನೆಯಲ್ಲಿ ಸಾರ್ಕ್ ಸಮ್ಮೇಳನ ನಡೆದಿದೆ, ಬೇಕಾದಷ್ಟು ಅಂಡರ್ ಸ್ಟ್ಯಾಂಡಿಂಗ್‌ಗಳು ನಡೆದಿವೆ, ಬೇಕಾದಷ್ಟು ಆಬ್ಲಿಗೇಷನ್‌ಗಳಿವೆ, ಬೇಕಾದಷ್ಟು ವಿಚಾರವಿದೆ, ಮೆಂಬರ್ಸ್ ಇದ್ದಾರೆ ಮೂವ್‌ಮೆಂಟ್ ಇದೆ. ಅಂತಹ ಮೂವ್‌ಮೆಂಟ್ ಇರುವಂಥ ಸಂದರ್ಭದಲ್ಲಿ ಇವರು ಪಕ್ಕದ ರಾಷ್ಟ್ರವನ್ನು ಇವರು XXX ಎಂದು ಘೋಷಣೆ ಮಾಡಿದರೆ ಅದು XXX ಅಲ್ಲವೇ ಎನ್ನುವ ವಿಚಾರದಲ್ಲಿ ಕಾಂಟೆಕ್ಸ್ಟ್ ಇರುವುದು ನಿಜ. ನಾನು ಅದನ್ನು ಒಪ್ಪುತ್ತೇನೆ. ನಾನು ಹೇಳಿದುದನ್ನು ವಿತ್‌ಡ್ರಾ ಮಾಡುವಂಥ ಪ್ರಶ್ನೆಯೇ ಇಲ್ಲಿ ಇಲ್ಲ. ಮೊದಲು, ನಾನು ಹೇಳಿರುವುದಲ್ಲ. ಅವರು ಹೇಳಿರುವುದನ್ನು ನಾನು XXX ಎಂದು ಕರೆಯುತ್ತೇನೆ. ಅವರು ಮೊದಲು ವಿತ್‌ಡ್ರಾ ಮಾಡಬೇಕು. ಈ ರಾಜ್ಯ ಸರ್ಕಾರ XXX ಅಂದರೆ ಪಕ್ಕದ XXX ರಾಷ್ಟ್ರಕ್ಕೆ ಬೆಂಬಲ ಕೊಟ್ಟರು, ಹೂವು ಕೊಟ್ಟರು ಎನ್ನುವ ಮಾತನ್ನು ಮೊದಲು ಅವರು ವಿತ್‌ಡ್ರಾ ಮಾಡಬೇಕು, ಆಮೇಲೆ ನೆಕ್ಸ್ಟ್ ಪಾಯಿಂಟ್.

ಗೊಂದಲ

ಶ್ರೀ ಕಾಗೋಡು ತಿಮ್ಮಪ್ಪ : ನೀವೂ ಅದನ್ನು ವಾಪಸ್ಸು ತೆಗೆದುಕೊಳ್ಳಿ.

ಗೊಂದಲ

ಶ್ರೀ ಕಾಗೋಡು ತಿಮ್ಮಪ್ಪ : ಹಾಗಿದ್ದರೆ, ಬಸ್ ಸಂಚಾರವನ್ನು ಏಕೆ ಕೇಂದ್ರ ಸರ್ಕಾರದವರು ಪ್ರಾರಂಭ ಮಾಡಿದರು?

ಶ್ರೀ ಡಿ.ಕೆ. ಶಿವಕುಮಾರ್ : ಯಾವುದು XXX ಯಾರ XXX

ಶ್ರೀ ಆರಗ ಜ್ಞಾನೇಂದ್ರ (ತಮ್ಮ ಸ್ಥಾನದಿಂದ) : ತಿಮ್ಮಪ್ಪನವರೇ, ಆಗ ತಾವು ಇರಲಿಲ್ಲ. ಇದು ತೀರ್ಮಾನ ಮಾಡುವ ಮೊದಲು ದಯವಿಟ್ಟು ಕಡತ ತೆಗೆಸಿ ನೋಡಿ. ನಾನು ಏನು ಹೇಳಿದ್ದೇನೆ ಎಂದು ನೋಡಿ. ಸದನದಲ್ಲಿ ಇಷ್ಟು ಜನರಿದ್ದಾರೆ, ಮಾಧ್ಯಮದವರು ಇಷ್ಟು ಜನರಿದ್ದಾರೆ, ನಾನು ಆ ರೀತಿ ಅರ್ಥ ಬರುವ ರೀತಿಯಲ್ಲಿ ಹೇಳಿದ್ದೇನೆ ಎಂದರೆ...

XXX ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಉಪಾಧ್ಯಕ್ಷರೇ, ಕಡತ ತರಿಸಿ ನೋಡಿ, ನಂತರ ತೀರ್ಮಾನ ಮಾಡಿ, ಈಗ ಸದನವನ್ನು ಮುಂದಕ್ಕೆ ಹಾಕಿ.

ಗೊಂದಲ

ಉಪಾಧ್ಯಕ್ಷರು : ಬೇಕಾದರೆ ಕಡತವನ್ನು ನಂತರ ತರಿಸಿ ಹೇಳೋಣ, ಅದರಲ್ಲಿ ಪ್ರಶ್ನೆ ಇಲ್ಲ, ಆಮೇಲಾದರೂ .....

ಶ್ರೀ ಆರಗ ಜ್ಞಾನೇಂದ್ರ (ತಮ್ಮ ಸ್ಥಾನದಿಂದ) : ತಾವು ಕಡತ ತರಿಸಿ ನೋಡಿ ತೀರ್ಮಾನ ಮಾಡಬೇಕಾಗುತ್ತದೆ. ಏಕೆಂದರೆ ಮುಂದೆ, ಇನ್ಯಾವತ್ತೋ ಒಂದು ದಿವಸ, ಯಾರೋ ಒಬ್ಬರು ಇದನ್ನು ಓದಿ ನೋಡಿ ನಮ್ಮ ಬಗ್ಗೆ ಒಂದು ಸಣ್ಣ ಭಾವನೆಯನ್ನು ತಾಳಬಾರದು. ದಯವಿಟ್ಟು ನೀವು ಓದಬೇಕು, ತೀರ್ಮಾನವನ್ನು ಕೊಡಬೇಕು. ಇಲ್ಲಿ ಇಷ್ಟು ಜನರಿದ್ದಾರೆ, ಮಾಧ್ಯಮದವರಿದ್ದಾರೆ, ಮೇಲುಗಡೆಯಿಂದ ಸಾರ್ವಜನಿಕರು ನೋಡುತ್ತಿದ್ದಾರೆ. ಬಾಯಿಗೆ ಬಂದ ಹಾಗೆ ಇವರು ಮಾತನಾಡುವಂಥಾದ್ದು ಅಲ್ಲ. ಬಾಯಿಗೆ ಬಂದ ಹಾಗೆ, ರಸ್ತೆ ಬದಿಯಲ್ಲಿ ಹೇಳುವ ಹಾಗೆ ಇಲ್ಲಿ ಇಂಟರ್‌ಪ್ರಿಟ್ ಮಾಡುವುದು ಆಗುವುದಿಲ್ಲ.

ಉಪಾಧ್ಯಕ್ಷರು : ಜ್ಞಾನೇಂದ್ರರವರೇ, ಒಂದು ನಿಮಿಷ ಇರಿ. ಮೊದಲನೆಯದಾಗಿ, ಅವರು ಬಳಸಿದ XXX ಪದವನ್ನು ನಾನು ತೆಗೆದು ಹಾಕಿದ್ದೇನೆ. ಎರಡನೆಯದು,...

ಶ್ರೀ ಆರಗ ಜ್ಞಾನೇಂದ್ರ : ಇದು ಅನ್‌ಪಾರ್ಲಿಮೆಂಟರಿ ಶಬ್ದವೇ?

ಉಪಾಧ್ಯಕ್ಷರು : ಯಾವ ಹಿನ್ನಲೆಯಲ್ಲಿ ತೆಗೆದು ಹಾಕಿದ್ದೇನೆ ಎನ್ನುವುದನ್ನು ಕೇಳಿ.

ಶ್ರೀ ಆರಗ ಜ್ಞಾನೇಂದ್ರ : ಅದು ಅನ್‌ಪಾರ್ಲಿಮೆಂಟರಿಯೇ? ನಾನು ಯಾವ ಉದ್ದೇಶದಿಂದ ಸಂಬೋಧನೆ ಮಾಡಿದ್ದೇನೆ ಎಂದು ಅದನ್ನು ಓದಿದ ಮೇಲೆ ತೆಗೆದು ಹಾಕಿ. ಅದು ಅನ್‌ಪಾರ್ಲಿಮೆಂಟರಿಯಾದರೆ ಖಂಡಿತಾ ತೆಗೆದು ಹಾಕಿ.

ಉಪಾಧ್ಯಕ್ಷರು : ಏಕೆಂದರೆ, XXX ಆ ರೀತಿ ಏನೂ ಘೋಷಣೆಯಾಗಿಲ್ಲ. ಆದ್ದರಿಂದ, XXX ಆ ಪದ ಇಲ್ಲಿ ರೆಕಾರ್ಡ್‌ನಲ್ಲಿ ಬೇಡ. ಎರಡನೆಯದಾಗಿ, ಅವರು ಏನೊಂದು ಸಂಬೋಧನೆ ಮಾಡಿದರಲ್ಲಾ, ...

ಶ್ರೀ ಎಸ್. ಸುರೇಶ್‌ಕುಮಾರ್ (ತಮ್ಮ ಸ್ಥಾನದಿಂದ) : ನೂರ್ ಫಾತಿಮಾ ಎನ್ನುವ ಎರಡು ವರ್ಷದ ಹುಡುಗಿ ಭಾರತಕ್ಕೆ ಬಂತು. ಇಡೀ ದೇಶದ ಗಮನವನ್ನು ಆ ಮಗು ಸೆಳೆಯಿತು. ಈ ರೀತಿ ಪ್ರತಿದಿವಸ ಅನೇಕರು ಬರುತ್ತಿರುತ್ತಾರೆ. ಹೀಗಿರುವಾಗ ಆ ಮಗು ಮಾತ್ರ ಏಕೆ ಎಲ್ಲರ ಗಮನ ಸೆಳೆಯಿತು. ಅಂದರೆ ಭಾರತ ಮತ್ತು ಪಾಕಿಸ್ತಾನದ ನಡುವೆ ಬಂದಿರುವಂಥ ಸಮಸ್ಯೆಗೆ ಆ ಮಗು ಮಿತ್ರುತ್ವದ ಒಂದು ಸೇತುವೆ ಆಗುತ್ತಾಳೆ ಎನ್ನುವ ಕಾರಣದಿಂದ. ಮಿತ್ರತ್ವದ ಬಗ್ಗೆ ಯಾವಾಗ ಬರುತ್ತದೆಂದರೆ, ಶತ್ರುತ್ವ ಇದ್ದಾಗ. ಹೀಗಿರುವಾಗ, ಅವರು ಹೇಳಿರುವುದರಲ್ಲಿ ಏನಾದರೂ ತಪ್ಪಿದ್ದರೆ,..

ಗೊಂದಲ

ಶ್ರೀ ಎಸ್. ಸುರೇಶ್‌ಕುಮಾರ್ : ನಾನು ಹೇಳುತ್ತೇನೆ ಕೇಳಿ, XXX ಎಂದು ಇಡೀ ಪ್ರಪಂಚಕ್ಕೇ ಗೊತ್ತು. ಹೀಗೆ ಎಲ್ಲರಿಗೂ ಗೊತ್ತಿರುವಾಗ, ಅದನ್ನು ನಾವು ಹೇಳುವುದರಲ್ಲಿ ಏನು ತಪ್ಪಿದೆ?

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮತ್ತೆ ಬಸ್ಸನ್ನೇಕೆ ಓಡಿಸುತ್ತೀರಿ?

ಶ್ರೀ ಎಸ್. ಸುರೇಶ್‌ಕುಮಾರ್ : ಅದಕ್ಕೋಸ್ಕರ, ತಾವು ದಯವಿಟ್ಟು ರೆಕಾರ್ಡ್ ತರಿಸಿ ನೋಡಿ. ಜ್ಞಾನೇಂದ್ರರವರು ಏನು ಹೇಳಿದ್ದಾರೆ, ಅದನ್ನು ದಯವಿಟ್ಟು ಇಲ್ಲಿ ರೆಕಾರ್ಡ್ ತರಿಸಿ ಓದಿಸಿ, ಆಮೇಲೆ ಅಡ್ಜರ್ನ್ ಮಾಡಿ, ಅದಕ್ಕೂ ಮುಂಚೆ ಅಡ್ಜರ್ನ್ ಮಾಡಬೇಡಿ. ಈಗಲೇ ಓದಿಸಿ. ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ, ದಯವಿಟ್ಟು ಈಗ ಅಡ್ಜರ್ನ್ ಮಾಡಬೇಡಿ. ದಯವಿಟ್ಟು ಮೊದಲು ಓದಿಸಿ, ನಂತರ ಅಡ್ಜರ್ನ್ ಮಾಡಿ.

ಉಪಾಧ್ಯಕ್ಷರು : ನಾನು ಈ ವಿಷಯವನ್ನು ಬೆಳೆಸಲು ಹೋಗುವುದಿಲ್ಲ. ಆದ್ದರಿಂದ, ಅಂತಹ XXXXXX ಯಾವುದೇ ಶಬ್ದಗಳಿದ್ದರೂ ನಾನು ತೆಗೆದು ಹಾಕಿದ್ದೇನೆ. ಮತ್ತು ಸರ್ಕಾರದ ಪರವಾಗಿ ಮಾನ್ಯ ಸಂಸದೀಯ ಸಚಿವರು, ಮುಂದೆ ಹೀಗಾಗದ ಹಾಗೆ ನಾವು ನೋಡಿಕೊಳ್ಳುತ್ತೇವೆ ಎಂದು ಹೇಳಿ, ವಿಷಾದವನ್ನು ವ್ಯಕ್ತಪಡಿಸಿದ ಹಿನ್ನಲೆಯಲ್ಲಿ.....

ಶ್ರೀ ಎಸ್. ಸುರೇಶ್ ಕುಮಾರ್ : ಉಪಾಧ್ಯಕ್ಷರೇ, ಪ್ರಶ್ನೆ ಅದಲ್ಲ, Even now, the Minister is unrepented, he is not repenting. ಸಮಸ್ಯೆಯಾಗಿರುವುದು ಅದು. ಮಾನ್ಯ ಚಂದ್ರೇಗೌಡರು ಅಷ್ಟೆಲ್ಲಾ ಹೇಳಿದ ಮೇಲೂ ಕೂಡ ಸನ್ಮಾನ್ಯ ಶಿವಕುಮಾರ್ ರವರು ಎದ್ದುನಿಂತುಕೊಂಡು ಅದನ್ನೇ ರಿಪೀಟ್ ಮಾಡುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಮಾನ್ಯ ಚಂದ್ರೇಗೌಡರು ಹೇಳಿದ್ದಾರೆ, ಅವರೇ ಸ್ವತಃ, ನಿಮ್ಮ ಮನಸ್ಸಿಗೆ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಹೇಳಿದ್ದಾರೆ.

ಗೊಂದಲ

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಹೇಳುವುದನ್ನು ಸ್ವಲ್ಪ ಕೇಳೀ. ಅದಾದಮೇಲೆ ತಾವು ಕಡತದಿಂದ ಎರಡು ಪದಗಳು ಇರಬಾರದು ಎಂದು ತಾವು ತೆಗೆಸಿಯೂ ಹಾಕಿದ್ದೀರಿ. ಕಡತದಿಂದ ತೆಗೆದ ಮೇಲೆ, ಪುನಃ ವಿತ್‌ಡ್ರಾ ಮಾಡಿ, ವಿತ್‌ಡ್ರಾ ಮಾಡಿ ಎಂದರೆ ಇಲ್ಲಿ ವಿತ್‌ಡ್ರಾ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ತಾವೂ ಹೇಳಿದ್ದೀರಿ ಮತ್ತು ಈಗಾಗಲೇ ಸರ್ಕಾರದ ಕಿರಿಯ ಸಚಿವರು ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ದಯವಿಟ್ಟು ಇದನ್ನು ಇಲ್ಲಿಗೇ ಕ್ಲೋಸ್ ಮಾಡಿ. ಸುಮ್ಮನೆ ಇದನ್ನು ಅನಾವಶ್ಯಕವಾಗಿ ಬೆಳೆಸಿಕೊಂಡು ಹೋಗುವುದು ಬೇಡ. ಅವರೂ ಹೇಳಿದರು, ನೀವೂ ಹೇಳಿದಿರಿ, ಆ ಕತೆ ಈಗ ಮುಗಿಯಿತಲ್ಲಾ. ಎರಡೂ ಕಡೆ ನಡೆಯುತ್ತದೆ. ಆದ್ದರಿಂದ ದಯವಿಟ್ಟು ಇದನ್ನು ಇಲ್ಲಿಗೇ ಕ್ಲೋಸ್ ಮಾಡಿ.

ಗೊಂದಲ

ಶ್ರೀ ಎಸ್. ಸುರೇಶ್ ಕುಮಾರ್ : ಪ್ರಶ್ನೆ ಇರುವುದು ಅದಲ್ಲ. ಪ್ರಶ್ನೆ ಇರುವುದು ಬೇರೊಂದು.

ಗೊಂದಲ

ಉಪಾಧ್ಯಕ್ಷರು : ಈಗಾಗಲೇ ಮಾನ್ಯ ಚಂದ್ರೇಗೌಡರು ವಿಷಾದವನ್ನು ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ಇಲ್ಲಿಗೆ ಮುಗಿಸಿ, ಮತ್ತೆ ಮೂರೂವರೆ ಗಂಟೆಗೆ ಈ ಸದನ ಸೇರುವಂತೆ ಈಗ ಸದನವನ್ನು ಮುಂದೂಡಿದ್ದೇನೆ.

XXX ಸನ್ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.